ವಿಷಯವನ್ನು ಪ್ರಧಾನವಾಗಿ ಇಟ್ಟುಕೊಂಡು ಭಾಷಾ ನೀತಿಯನ್ನು ಬದಲಾವಣೆ ಮಾಡಬೇಕುನ್ನುವುದು ಸರಿಯಲ್ಲ. ಭಾಷಾ ನೀತಿಯಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ದಯಮಾಡಿ ಅದರ ಬಗ್ಗೆ ಚರ್ಚೆ ಮಾಡೋಣ, ವಿಚಾರ ಮಾಡೋಣ ಆದರೆ ಇದರಲ್ಲಿ ಹಿಂದಿ ಹೇರಿಕೆ ಮತ್ತೊಂದು ಹೇರಿಕೆ ಯಾವುದೂ ಇರುವುದಿಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ರಾಜ್ಯ ಸಾರಿಗೆ ಬಸ್ಸುಗಳು ಸಕಾಲದಲ್ಲಿ ಹೊರಡದಿರುವುದು.

1131 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳನ್ನು ಸರಿಯಾಗಿ ನಡೆಸದ ಕಾರಣ ಪ್ರಯಾಣಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸೇಡಂ ಭಾಗದ ಮುಧೋಳ, ಕೋಲಕುಂಡಮೋತಕಪಲ್ಲಿ ಮಾರ್ಗವಾಗಿ ಗುರುಮಿಟಕಾಲ್ ಹಾಗೂ ಕೋಲಕುಂಡನಾಚವಾರ್ ಮಾರ್ಗವಾಗಿ ಗುರುಮಿಟಕಾಲ್ ಮತ್ತು ಯಾದಗಿರಿ ಕೊಡ್ಲಾ ಮಾರ್ಗವಾಗಿ ಸೇಡಂ ಗುಲ್ಬರ್ಗಾ ಅದೇ ಪ್ರಕಾರ ಗುಲ್ಬರ್ಗ ನಾಡೇಪಲ್ಲಿ, ಖಾನಗುಡ್ಡ ಮಾರ್ಗವಾಗಿ ನಾರಾಯಣ ಪೇಟೆ ಇತ್ಯಾದಿ ಕಡೆ ಹೋಗುವ ಬಸ್‌ಗಳ ವೇಳೆಯಲ್ಲಿ ನಡೆಸದೆ ಪ್ರಯಾಣಿಕರಿಗೆ ತೊಂದರೆಯಾಗಿ ಮತ್ತು ಅಂಚೆ ಸಹ ಸಮಯಕ್ಕೆ ಸರಿಯಾದ ವೇಳೆಯಲ್ಲಿ ಮುಟ್ಟದೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಈಗಲಾದರೂ ಸಹ ಈ ಭಾಗದಲ್ಲಿ ಬಸ್‌ಗಳನ್ನು ಸಮಯಕ್ಕೆ ಸರಿಯಾಗಿ ನಡೆಸುವ ವ್ಯವಸ್ಥೆ ಮಾಡಲು ಸರ್ಕಾರ ವ್ಯವಸ್ಥೆ ಮಾಡಬಹುದೆ?

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ನಿಯಮಿತ ವೇಳೆಗೆ ಬರಲಾಗದಿದ್ದಕ್ಕೆ ರಸ್ತೆಯು ಸರಿ ಇಲ್ಲದ ಕಾರಣದಿಂದ ನಿಯಮಿತೆಯನ್ನು ಉತ್ತಮಪಡಿಸುವ ಸಲುವಾಗಿ ರಸ್ತೆಗಳನ್ನು ದುರಸ್ಥಿ ಮಾಡಿ ಮತ್ತು ಮೇಲುಹೊದಿಕೆ ಹಾಕಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗಿದೆ.

ಈ) ನಿಯಮಿತ ವೇಳೆಯಲ್ಲಿ ಕಾಪಾಡಿಕೊಳ್ಳುವಂತೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯವರಿಗೆ ಪರಿಶೀಲಿಸಿ ಸಾರಿಗೆ ವ್ಯವಸ್ಥೆಯನ್ನು ನೀಡುವಂತೆ ಸೂಚಿಲಾಗಿದೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಸಭಾಧ್ಯಕ್ಷರೇ, ನಾನು ಗುಲ್ಬರ್ಗಾ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಸರಿಯಾದ ವೇಳೆಯಲ್ಲಿ ನಡೆಸದೇ ಇರುವುದರಿಂದ ಪ್ರಮಾಣಿಕರಿಗೆ ತೊಂದರೆಯಾಗಿ ಮತ್ತು ಅಂಚೆ ಸಹ ಸಮಯಕ್ಕೆ ಸರಿಯಾದ ವೇಳೆಯಲ್ಲಿ ಮುಟ್ಟದೇ ಅನಾನುಕೂಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದರ ಬಗ್ಗೆ ಕೈಗೊಂಡಿರುವ ಕ್ರಮ ಏನು ಎಂದು ಕೇಳಿದರೆ ನಿಯಮಿತ ವೇಳೆಗೆ ಬಸ್ ಬರಲಾಗದಿದ್ದುದ್ದಕ್ಕೆ ರಸ್ತೆ ಸರಿ ಇಲ್ಲದಿರುವುದು ಎಂದು ಕಾರಣ ತಿಳಿಸಿದ್ದಾರೆ. ರಸ್ತೆ ಸರಿ ಇಲ್ಲದಿದ್ದರೆ ಬಸ್ ಹೋಗಿ ಬರುವ ವೇಳೆಯಲ್ಲಿ ವಿಳಂಬ ಆಗಬಹುದು, ಆದರೆ ಬಸ್‌ಗಳು ಡಿಪೋದಿಂದ 2-3 ತಾಸು ಲೇಟಾಗಿ ಬಿಡುತ್ತವೆ. ಅಲ್ಲದೆ 8-8 ದಿವಸ ಆದರೂ ಸಹ ಆ ರಸ್ತೆಯಲ್ಲಿ ಬಸ್ ಬರುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಆಗಬಹುದಾದಂತಹ ತೊಂದರೆಯನ್ನು ಗಮನಿಸಿ

ನಾನು ಡಿವಿಜನಲ್ ಕಂಟ್ರೋಲರ್ ಗುಲ್ಬರ್ಗಾ ಡಿವಿಜನ್‌ನವರಿಗೆ ಮತ್ತು ಮಾನ್ಯ ಸಾರಿಗೆ ಸಚಿವರಿಗೆ ದಿನಾಂಕ 8-9-1990ರಂದು ಪತ್ರ ಮುಖಾಂತರ ತಿಳಿಸಿದ್ದೇನೆ. ಯಾವ ಕ್ರಮವೂ ಇಲ್ಲ, ಇದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಅಜೀಜ್ ಸೇಠ್ : ಈ ಗುಲ್ಬರ್ಗಾ ಡಿವಿಜನ್ ಬಗ್ಗೆ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಗುಲ್ಬರ್ಗಾ ಡಿವಿಜನ್‌ನಲ್ಲಿ ರಾಯಚೂರು, ಬೀದರ್ ಇತ್ಯಾದಿ ಕಡೆಗಳಲ್ಲಿ ಹಿಂದೆ ಹೆವಿ ರೇನ್ ಆಗಿ ರಸ್ತೆ ಎಲ್ಲಾ ಹಾಳಾಗಿದ್ದು, ಸರಿಯಾದ ರಸ್ತೆ ಇಲ್ಲ. ತಾವು ಸಹ ಈ ವಿವರ ನೋಡಬಹುದು. ನಮ್ಮ ಬಸ್‌ಗಳಲ್ಲಿ ಬ್ರೇಕ್ ಡೌನ್ ಆಗಿರುವುದು, ಟೈರ್ ಪಂಕ್ಚರ್ ಆಗಿರುವುದು, ಸ್ಪ್ರಿಂಗ್‌ಗಳು ಕಟ್‌ಆಗಿರುವುದು ಇತ್ಯಾದಿಯಾಗಿ ನಾನು ತೊಂದರೆಗಳಾಗಿವೆ. ಹೀಗಾಗಿ ಬಸ್‌ಗಳು ಸರಿಯಾಗಿ ಆಗಿಲ್ಲ. ಮಾನ್ಯ ಸದಸ್ಯರು ಈಗ ಡಿಪೋದಿಂದ ಬಸ್ ಬರುವುದು ತಡವಾಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಈಗತಾನೇ ನನ್ನ ಗಮನಕ್ಕೆ ತಂದಿದ್ದಾರೆ. ಡಿಪೋದಿಂದ ಬಸ್‌ಗಳು ಬರುವುದು ಏನಾದರೂ ತಡವಾದರೆ ಶೀಘ್ರದಲ್ಲಿಯೇ ಅದನ್ನು ಸರಿಪಡಿಸುತ್ತೇನೆ ಎಂದು ಹೇಳುತ್ತಿದ್ದೇನೆ. ಮತ್ತೆ ಕೊನೆಯ 'ಡಿ' ಉತ್ತರದಲ್ಲಿ ಈ ರೀತಿ ಇದೆ. 'Does the Government take action.' I want to make a correction. KSRTC will be directed to operate the buses according to timings as per time schedule.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ಪ್ರಶ್ನೆ ಕೇಳಿದ್ದೆ. 2-3 ದಿವಸಗಳು ಬಸ್ಸನ್ನು ಬಂದ್ ಮಾಡಿದರ ಬಗ್ಗೆ ಕೇಳಿದರೆ ಆದಾಯ ಇಲ್ಲವೆಂದು ಹೇಳುತ್ತಾರೆ. ನಾನು ಸ್ವತಃ ಆ ಭಾಗದಲ್ಲಿ ಪ್ರಯಾಣ ಮಾಡುವಾಗ ಬಸ್‌ನ ಒಳಗೆ ಹಾಗೂ ಮೇಲೆ ಪ್ರಯಾಣಿಕರು ಕುಳಿತಿರುವುದನ್ನು ನೋಡಿದ್ದೇನೆ. ಆ ಬಸ್ ನಂಬರ್ ಮತ್ತು ವೇಳೆಯನ್ನು ಸಹ ನಮೂದಿಸಿ ಮಾಹಿತಿ ಕೊಟ್ಟಿರುವ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮ ಏನು ಮತ್ತು ಆ ಬಸ್‌ಗಳಿಂದ ಬಂದ ಆದಾಯ ಏನು ಎಂದು ಕೇಳಿದ್ದೆ. ಆದರೆ ಇದುವರೆಗೆ ಈ ಬಗ್ಗೆ ಯಾವ ಉತ್ತರವೂ ಇಲ್ಲ.

ಶ್ರೀ ಅಜೀಜ್ ಸೇಠ್ : ಅದನ್ನು ವಿಚಾರಿಸಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಬಾಡಿಗೆ ಕಟ್ಟಡದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ

509 - ಶ್ರೀ— ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿರುವ ವಿಶ್ವವಿದ್ಯಾ ನಿಲಯಗಳಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳು ಬಾಡಿಗೆ ಮತ್ತು ಸರ್ಕಾರದ ಸ್ವಂತ ಕಟ್ಟಡಗಳಲ್ಲಿವೆ? ಅವುಗಳಲ್ಲಿ ಯಾವ ವಿಶ್ವವಿದ್ಯಾನಿಲಯ ಸರ್ಕಾರದ ಕಟ್ಟಡ ಹೊಂದಿದೆ, ಮತ್ತು ಯಾವ ವಿಶ್ವವಿದ್ಯಾನಿಲಯ ಬಾಡಿಗೆ ಕಟ್ಟಡದಲ್ಲಿದೆ (ವಿವರ ನೀಡುವುದು)?*
2. *ಸರ್ಕಾರಿ ಪಾಲಿಟೆಕ್ನಿಕ್ ಚನ್ನಪಟ್ಟಣ ಇಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ?*
3. *ಹಾಗಿದ್ದರೆ ಇದನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿಗಳು) :

1. ಎಲ್ಲಾ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಸ್ವಂತ ಕಟ್ಟಡ ಹೊಂದಿದೆ. ಆದರೆ ಕುವೆಂಪು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗವು ಮಾತ್ರ ಬಾಡಿಗೆ ಕಟ್ಟಡದಲ್ಲಿದೆ.